ಕರ್ನಾಟಕ ಸರ್ಕಾರ

ಜಂಟಿ ನಿರ್ದೇಶಕರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು-09
ದೂ.ಸಂ:22242943, ಫ್ಯಾಕ್ಸ್ :22271998, ಇ-ಮೇಲ್: jd_mms@yahoo.co.in

ಸಂಖ್ಯೆ: ಎ07(ಎ06)/ಅದಾ/22/ಆಹಾರ ಭದ್ರತಾ ಕಾಯ್ದೆ/2015-16 /72

ದಿನಾಂಕ: 18.05.2017

## ಸುತ್ತೋಲೆ

O/C ರವಾನಿಸಲಾಗಿದೆ. 26/5/17

ವಿಷಯ: ರಾಜ್ಯದ ಶಿಕ್ಷಣ ಸಂಸ್ಥೆಗಳಲ್ಲಿ ಕ್ಯಾಂಟೀನ್/ಮೆಸ್‌ಗಳನ್ನು ನಡೆಸಲು FSS Act 2006ರನ್ವಯ ಪರವಾನಗಿ ಪಡೆದುಕೊಳ್ಳುವ ಸಂಬಂಧ.

ಉಲ್ಲೇಖ: Licencing Authority Under FSSAI, Southern Region ಇವರ ಪತ್ರ ಸಂ. 2/Enf./FSSAI/2016-17 Dated 30.11.2016

*****

ಆಹಾರ ಸುರಕ್ಷತೆ ಮತ್ತು ಮಾನಕಗಳ ಕಾಯ್ದೆ 2006 ಮತ್ತು ನಿಯಮ ಹಾಗೂ ನಿಬಂಧನೆಗಳು-2011 ದಿನಾಂಕ 05.08.2011ರಿಂದ ರಾಷ್ಟ್ರಾದ್ಯಂತ ಜಾರಿಗೊಂಡಿರುತ್ತದೆ. ಈ ಕಾಯ್ದೆಯನ್ವಯ ಸಿದ್ಧ ಆಹಾರಕ್ಕೆ ಸಂಬಂಧಿಸಿದಂತೆ ವ್ಯವಹಾರಗಳನ್ನು ನಡೆಸಲು, FSS ಕಾಯ್ದೆಯನ್ವಯ ಅಧಿಕೃತ ಪರವಾನಗಿಯನ್ನು ಹೊಂದಿರಬೇಕು.

ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಅಡಿಯಲ್ಲಿ ಬರುವ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಸಂಸ್ಥೆಯ ವತಿಯಿಂದ ಅಥವಾ ಖಾಸಗಿ ವ್ಯಕ್ತಿಗಳು ಮೆಸ್/ಕ್ಯಾಂಟೀನ್ ನಡೆಸುತ್ತಿದ್ದಲ್ಲಿ, ಅಂತಹ ವ್ಯವಹಾರದಾರರು ಕಡ್ಡಾಯವಾಗಿ ಸಂಬಂಧಿಸಿದ ಜಿಲ್ಲೆಯ ಸಕ್ಷಮ FSS ಅಧಿಕಾರಿಗಳಿಂದ ಅಧಿಕೃತ ಪರವಾನಗಿಯನ್ನು ಪಡೆಯಬೇಕಾಗಿರುತ್ತದೆ. ಪರವಾನಗಿ ಇಲ್ಲದೆ ಮೆಸ್/ಕ್ಯಾಂಟೀನ್‌ಗಳನ್ನು ನಡೆಸುವುದು ನಿಯಮ ಬಾಹಿರ ವಾಗಿರುತ್ತದೆ.

ಆದ್ದರಿಂದ ಸರ್ಕಾರಿ/ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮೆಸ್/ಕ್ಯಾಂಟೀನ್ ನಡೆಸುತ್ತಿದ್ದರೆ ಅಥವಾ ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿದ್ದಲ್ಲಿ ನಿಯಮಾನುಸಾರ ಪರವಾನಗಿ ಪಡೆಯುವಂತೆ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ ಶಾಲೆಗಳಿಗೆ ಮತ್ತು ವಿದ್ಯಾಸಂಸ್ಥೆಗಳಿಗೆ ಸೂಚಿಸಲು ತಿಳಿಸಿದೆ. ಪರವಾನಗಿ ಪಡೆಯಲು ಆನ್ ಲೈನ್‌ನಲ್ಲಿ ಅಫಿಷಿಯಲ್ ವೆಬ್ ಸೈಟ್ www.fssai.gov.in ಮೂಲಕ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಈ ಸಂಬಂಧ ಹೆಚ್ಚಿನ ವಿವರಗಳಿಗೆ ಜಿಲ್ಲೆಯ ಸಕ್ಷಮ FSS (ಆಹಾರ ಇಲಾಖೆ) ಅಧಿಕಾರಿಗಳನ್ನು ಸಂಪರ್ಕಿಸಲು ಸೂಚಿಸಿದೆ. ಈ ನಿಟ್ಟಿನಲ್ಲಿ ಆಯಾ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ಸಾ.ಶಿ.ಇಲಾಖೆ ಇವರು ಅಗತ್ಯ ಕ್ರಮವಹಿಸಲು ತಿಳಿಸಿದೆ.

(ವಿ. ಸುಮಂಗಲ)
ಜಂಟಿ ನಿರ್ದೇಶಕರು,
ಮಧ್ಯಾಹ್ನ ಉಪಹಾರ ಯೋಜನೆ,
ಬೆಂಗಳೂರು.

ಪ್ರತಿಯನ್ನು, ಕ್ರಮಕ್ಕಾಗಿ :

1. ರಾಜ್ಯ ಎಲ್ಲಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರಿಗೆ ವಂದನೆಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಅಪರ ಆಯುಕ್ತರು, ಸಾ.ಶಿ.ಇಲಾಖೆ, ಗುಲ್ಬರ್ಗ ಮತ್ತು ದಾರವಾಢ ಆಯುಕ್ತಾಲಯ ಇವರಿಗೆ ವಂದನೆಗಳೊಂದಿಗೆ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
3. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಕಳುಹಿಸುತ್ತಾ, ನಿಮ್ಮ ವ್ಯಾಪ್ತಿಗೆ ಬರುವ ಅಧೀನ ಕಛೇರಿಗಳಿಗೆ ಜ್ಞಾಪನ ಹೊರಡಿಸಲು ತಿಳಿಸಿದೆ.
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಅಗತ್ಯ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಸಹಾಯಕ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ ಇವರಿಗೆ ಅಗತ್ಯ ಕ್ರಮಕ್ಕಾಗಿ.
6. ಆಯುಕ್ತರು, ಆಹಾರ ನಾಗರೀಕ ಪೂರೈಕೆ ಮತ್ತು ಸರಬರಾಜು ಇಲಾಖೆ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
7. ಕಛೇರಿ ಪ್ರತಿ.

H:\Web site-1.doc